ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ

ಸಂಖ್ಯೆ:ಭೂಮಿ/ಮಿನಿ/ಹೈಡಲ್ ಪ್ರಾಜೆಕ್ಟ್/ಸಿಆರ್-10/2013-14

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ
ಕೊಡಗು ವೃತ್ತ, ಮಡಿಕೇರಿ
ದಿನಾಂಕ: 16.08.2016.

ಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿ
ಮಡಿಕೇರಿ ವಿಭಾಗ, ಮಡಿಕೇರಿ.

**ವಿಷಯ:** Diversion of 0.8093 ha forest land in Madikeri Division for implementation of Beedalli Mini Hydel Project of 3 MW capacity at a distiance of 22 Km from Somwarpet Town Kodagu Hydel Projects Pvt. Ltd. Reg

**ಉಲ್ಲೇಖ:**
1. ನಿಮ್ಮ ಕಚೇರಿ ಪತ್ರ ಸಂಖ್ಯೆ:ಎ3/ಎಲ್ಎನ್‌ಡಿ/ವಿವ-34/ಕಿವಿಯೋ/ 2015-16, ದಿನಾಂಕ:02.03.2016.
2. ನಿಮ್ಮ ಕಚೇರಿ ಪತ್ರ ಸಂಖ್ಯೆ:ಎ3/ಎಲ್ಎನ್‌ಡಿ/ವಿವ-34/ಕಿವಿಯೋ/ 2015-16, ದಿನಾಂಕ:23.07.2016.

*****

ವಿಷಯಕ್ಕೆ ಸಂಬಂಧಿಸಿದಂತೆ ಮೆ:ಕೊಡಗು ಹೈಡಲ್ ಪ್ರಾಜೆಕ್ಟ್ ಪ್ರೈ ಲಿಮಿಟೆಡ್ ಬೆಂಗಳೂರು ಇವರು ಸೋಮವಾರಪೇಟೆ ತಾಲ್ಲೂಕು ಬೀದಳ್ಳಿ ಬಳಿ ಕುಮಾರಧಾರ ನದಿಗೆ ಅಡ್ಡಲಾಗಿ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಬೀದಳ್ಳಿ ಕಿರು ಜಲ ವಿದ್ಯುತ್ ಯೋಜನೆಯನ್ನು ಕೈಗೊಂಡಿದ್ದು. ಅಂತರ್‌ಜಾಲದ ಮೂಲಕ ಅರಣ್ಯ ಸಂರಕ್ಷಣಾ ಕಾಯ್ದೆಯಡಿ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಯೋಜನೆಗೆ ಬಳಸಿಕೊಳ್ಳುವ 0.8093 ಹೆಕ್ಟೇರ್ ಪ್ರದೇಶವುವೆಂದು ಉಲ್ಲೇಖದ (1)ರ ಪತ್ರದಲ್ಲೂ ಹಾಗೂ ಅಂತರ್‌ಜಾಲದಲ್ಲಿ ದಾಖಲಿಸಿರುತ್ತೀರಿ. ಅದರೆ ಉಲ್ಲೇಖ(2)ರಲ್ಲಿ ಸದರಿ ಯೋಜನೆಗೆ ಬಳಸಿಕೊಳ್ಳುವ ಪ್ರದೇಶದ ವಿಸ್ತೀರ್ಣವು 0.994 ಹೆಕ್ಟೇರ್ ಆಗಿರುತ್ತದೆಂದು ವರದಿ ಸಲ್ಲಿಸಿರುವುದು ಕಂಡು ಬಂದಿರುತ್ತದೆ.

ಅದುದರಿಂದ ಸದರಿ ಯೋಜನೆಗೆ ಉಪಯೋಗಿಸಿಕೊಳ್ಳುವ ಪ್ರದೇಶದ ವಿಸ್ತೀರ್ಣದಲ್ಲಿ ವ್ಯತ್ಯಾಸ ಕಂಡು ಬಂದಿರುವುದರಿಂದ ಮತ್ತೊಮ್ಮೆ ಸರಿಯಾಗಿ ಪರಿಶೀಲಿಸಿ ಖಚಿತ ಪಡಿಸಿಕೊಂಡು ಅಂತರ್‌ಜಾಲದ ಮೂಲಕ ದಾಖಲಿಸಲು ತಿಳಿಸುತ್ತಾ ಈ ಮೊದಲು ಅಂತರಜಾಲದ ಮೂಲಕ ಸಲ್ಲಿಸಿದ್ದ ಪ್ರಸ್ತಾವನೆಯನ್ನು ತಿರಸ್ಕರಿಸಿದೆ.

ಅದ್ದರಿಂದ ಹೊಸದಾಗಿ ಅರಣ್ಯ ಪ್ರದೇಶದ ವಿಸ್ತೀರ್ಣವನ್ನು ಅಂತರ ಜಾಲದ ಮೂಲಕ ದಾಖಲಿಸುವುದು.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಕೊಡಗು ವೃತ್ತ, ಮಡಿಕೇರಿ.